# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು

ಸಂಖ್ಯೆ:ಆ/ಪಿಎಸ್‌ಆರ್(ಜಿ)/ 5870 /2019-20 ದಿನಾಂಕ: 29-11-2019

## ಕಛೇರಿ ಆದೇಶ

**ವಿಷಯ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬಿಬಿಎಂಪಿಯಿಂದ ಪರವಾನಿಗೆ ಪಡೆದು ಮೂಲಸೌಕರ್ಯ ಸಂಸ್ಥೆಗಳು, ಟೆಲಿಕಾಂ/ನಾನ್-ಟೆಲಿಕಾಂ/ಇಂಟರ್ನೆಟ್ ಸರ್ವಿಸ್ ಪ್ರೊವೈಡರ್ ಸಂಸ್ಥೆಗಳು ರಸ್ತೆ ಕತ್ತರಿಸುವ ಸಂದರ್ಭದಲ್ಲಿ ಅಂತಹ ಸಂಸ್ಥೆ/ವ್ಯಕ್ತಿಗಳಿಂದ ರಸ್ತೆ ಪುನಶ್ಚೇತನ ಮೊತ್ತವನ್ನು ಭರಿಸಿಕೊಂಡು ಬಿಬಿಎಂಪಿಯಿಂದಲೇ ರಸ್ತೆ ಪುನಶ್ಚೇತನವನ್ನು ಕೈಗೊಳ್ಳುವ ಬಗ್ಗೆ.

**ಉಲ್ಲೇಖ:**
1. ರಿಟ್ ಪೆಟಿಷನ್ ಸಂಖ್ಯೆ 42927/2015ಕ್ಕೆ ಸಂಬಂಧಿಸಿ ಘನ ಉಚ್ಛ ನ್ಯಾಯಾಲಯವು ದಿನಾಂಕ 31-07-2019ರಂದು ಮಾಡಿರುವ ದೈನಿಕ ಆದೇಶ (Daily Order)
2. ಆಯುಕ್ತರ ಕಛೇರಿ ಆದೇಶ ಸಂಖ್ಯೆ ಬಿಬಿಎಂಪಿ/ಆಯುಕ್ತರು/ಪಿಆರ್/4493/1 /2019-20 ದಿನಾಂಕ 07-09-2019

### ಪ್ರಸ್ತಾವನೆ

ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳಲ್ಲಿ ರಸ್ತೆಗುಂಡಿಗಳು ಹೆಚ್ಚಾಗಿರುವ ಕುರಿತು ದಾಖಲಾಗಿರುವ ಸಾರ್ವಜನಿಕ ಹಿತಾಸಕ್ತಿ ದಾವೆ, ರಿಟ್ ಪೆಟಿಷನ್ ಸಂಖ್ಯೆ 42927/2015ಕ್ಕೆ ಸಂಬಂಧಿಸಿ ಘನ ಉಚ್ಛ ನ್ಯಾಯಾಲಯವು ದಿನಾಂಕ 31-07-2019ರಂದು ಬಿಬಿಎಂಪಿ ವ್ಯಾಪ್ತಿಯಲ್ಲಿ ಇರುವ ರಸ್ತೆಗಳ ನಿರ್ವಹಣೆಯ ಶಾಸನಾತ್ಮಕ ಮತ್ತು ಸಂವಿಧಾನಾತ್ಮಕ ಉತ್ತರದಾಯಿತ್ವವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊಂದಿರುವುದಾಗಿ ದೈನಿಕ ಆದೇಶ ನೀಡಿದ್ದು ಈ ಹಿನ್ನೆಲೆಯಲ್ಲಿ ರಸ್ತೆ ಕತ್ತರಿಸುವ ಸಂಸ್ಥೆಗಳಿಂದ ರಸ್ತೆ ಪುನಶ್ಚೇತನಕ್ಕೆ ಅಗತ್ಯ ಪೂರ್ಣ ಮೊತ್ತವನ್ನು ಭರಿಸಿಕೊಂಡು ಬಿಬಿಎಂಪಿಯಿಂದಲೇ ರಸ್ತೆ ಪುನಶ್ಚೇತನ ಕೈಗೊಳ್ಳುವ ಬಗ್ಗೆ ಪ್ರಮಾಣೀಕರಿಸುವಂತೆ ತಿಳಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಉಲ್ಲೇಖ 2ರಂತೆ ಪೂರಕ ಆದೇಶ ಹೊರಡಿಸಲಾಗಿತ್ತು. ಆನಂತರದಲ್ಲಿ ಭಾರತೀಯ ಸಂವಿಧಾನದ 21ನೇ ವಿಧಿಯ ಹಿನ್ನೆಲೆಯಲ್ಲಿ ಕೆ.ಎಂ.ಸಿ. ಕಾಯ್ದೆಯ ಪರಿಚ್ಛೇದ 31, 57, 58, 265, 266, 288, 289, 291 ಮತ್ತು ಇತರ ಅನ್ವಯವಾಗುವ ಪರಿಚ್ಛೇದಗಳು ಮತ್ತು ಅವುಗಳ ಅನುಚ್ಛೇದಗಳನ್ನು ಪರಾಮರ್ಶಿಸಿ ಉಲ್ಲೇಖ 2ರ ಆದೇಶವನ್ನು ಹಿಂಪಡೆದಿದೆ ಮತ್ತು ಈ ಕೆಳಗಿನಂತೆ ಆದೇಶಿಸಿದೆ.

### ಆದೇಶ

1. ಇನ್ನು ಮುಂದೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಬಿಬಿಎಂಪಿಯಿಂದ ಪರವಾನಿಗೆ ಪಡೆದು ರಸ್ತೆ ಕತ್ತರಿಸುವ ಪ್ರಸಂಗಗಳಲ್ಲಿ ರಸ್ತೆ ಕತ್ತರಿಸಿದ ಭಾಗಗಳ ಪುನಶ್ಚೇತನ ಬಿಬಿಎಂಪಿಯ ಜವಾಬ್ದಾರಿಯಾಗಿರುತ್ತದೆ.

2. ಬಿಬಿಎಂಪಿಯಿಂದ ಓ.ಎಫ್.ಸಿ. ಜಿ.ಐ.ಎಸ್. ಜಾಲತಾಣದ ಮೂಲಕ ಟೆಲಿಕಾಂ/ನಾನ್-ಟೆಲಿಕಾಂ/ಇಂಟರ್ನೆಟ್ ಸರ್ವಿಸ್ ಪ್ರೊವೈಡರ್ ಸಂಸ್ಥೆಗಳಿಗೆ ರಸ್ತೆಕತ್ತರಿಸುವ ಅನುಮತಿ ನಿಡುವ ಸಂದರ್ಭಗಳಲ್ಲಿ ಈಗಾಗಲೇ ನಿಗದಿಗೊಳಿಸಿರುವ ಪರವಾನಿಗೆ ಶುಲ್ಕ, ಮೇಲ್ವಿಚಾರಣೆ ಶುಲ್ಕದೊಂದಿಗೆ ರಸ್ತೆ ಪುನಶ್ಚೇತನ ಶುಲ್ಕವನ್ನು ಕೂಡ ಪಡೆದುಕೊಳ್ಳಲು ಸೂಚಿಸಿದೆ.

3. ರಸ್ತೆ ಪುನಶ್ಚೇತನ ಶುಲ್ಕವನ್ನು ಈ ಕೆಳಗಿನಂತೆ ನಿಗದಿಪಡಿಸಿದೆ.

| ಕ್ರ.ಸಂ. | ಅಳವಡಿಕೆ ವಿಧಾನ | ಮೂಲ ದರ | ಪುನಶ್ಚೇತನ ಮೊತ್ತ (ಪ್ರತಿ ಕಿ.ಮೀ.ಗೆ) |
|---|---|---|---|
| 1. | ಹೆಚ್.ಡಿ.ಡಿ. ಮಾದರಿ (1 ಮೀ ಉದ್ದ x 1 ಮೀ.ಅಗಲ x 1 ಮೀ ಆಳದ ಗುಂಡಿ) | ಪ್ರತಿ ಗುಂಡಿಗೆ ರೂ. 10,000/- | 1,30,000/- (ಪ್ರತಿ.ಕಿ.ಮಿ.ಗೆ 13 ಗುಂಡಿಗಳಂತೆ) |

ಸದರಿ ಮೊತ್ತವನ್ನು ಪ್ರಧಾನ ಅಭಿಯಂತರರು ಪ್ರತಿ 3 ತಿಂಗಳಗೊಮ್ಮೆ (ಅಥವಾ ಲೋಕೋಪಯೋಗಿ ದರಪಟ್ಟಿ/ಇಶ್ಯು ದರಗಳು ಬಿಡುಗಡೆಗೊಂಡಾಗ) ಪರಾಮರ್ಶಿಸಿ, ಮೊತ್ತ ಸೂಕ್ತವಾಗಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

4. ಓಪನ್ ಟ್ರೆಂಚ್ ಮಾದರಿಯಲ್ಲಿ ಟ್ರೆಂಚ್‌ನ್ನು ನಿಗದಿತ ಗಾತ್ರಕ್ಕಿಂತ ದೊಡ್ಡದಾಗಿ ನಿರ್ಮಿಸುವುದರಿಂದ ರಸ್ತೆ ಪುನಶ್ಚೇತನಕ್ಕೆ ಪಡೆದುಕೊಂಡಿರುವ ಮೊತ್ತಕ್ಕಿಂತ ಹೆಚ್ಚಿಗೆ ವೆಚ್ಚವಾಗುತ್ತಿದ್ದಲ್ಲಿ ಕೂಡಲೇ ಹೆಚ್ಚುವರಿ ಡಿಮ್ಯಾಂಡ್ ನೋಟ್ ಜಾರಿ ಮಾಡಿ ಹೆಚ್ಚುವರಿ ಮೊತ್ತ ಪಡೆದುಕೊಳ್ಳುವುದು.

5. ಹೆಚ್.ಡಿ.ಡಿ. ಮಾದರಿಯಲ್ಲಿ ಪ್ರತಿ ಮೀಟರಿಗೆ ರೂ.50/-ನ್ನು ಹೆಚ್ಚುವರಿ ಭದ್ರತಾ ಠೇವಣಿಯಾಗಿ ಪಡೆದುಕೊಳ್ಳುವುದು. ಅನುಮತಿ ಪತ್ರದಲ್ಲಿರುವುದಕ್ಕಿಂತ ಹೆಚ್ಚಿನ ಗುಂಡಿ ತೋಡಿದಲ್ಲಿ ಸದರಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಸಂಬಂಧಪಟ್ಟ ಜುರಿಸ್‌ಡಿಕ್ಷನಲ್ ಅಭಿಯಂತರರು ಸದರಿ ವರದಿಯನ್ನು ಆನ್-ಲೈನ್ ಮೂಲಕ ಕಾಮಗಾರಿ ಪೂರ್ಣಗೊಂಡ 30 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ವರದಿ ಸಲ್ಲಿಕೆಯಾಗದ ಪಕ್ಷದಲ್ಲಿ ಮೊತ್ತವನ್ನು ಸಂಸ್ಥೆಗಳಿಗೆ ಹಿಂದಿರುಗಿಸುವುದು.

6. ಪಾಲಿಕೆಯ ಮುಖ್ಯ ಲೆಕ್ಕಾಧಿಕಾರಿಗಳು ಸಂಗ್ರಹವಾಗುವ ರಸ್ತೆ ಪುನಶ್ಚೇತನ ಮೊತ್ತವನ್ನು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರ ಎಸ್ಕ್ರೋ ಖಾತೆಗೆ ವರ್ಗಾಯಿಸುವುದು.

7. ವಲಯ, ರಸ್ತೆಮೂಲಭೂತ ಸೌಕರ್ಯ ಮತ್ತು ಯೋಜನೆ-ಕೇಂದ್ರ ವ್ಯಾಪ್ತಿಯ ಕಾರ್ಯಪಾಲಕ ಅಭಿಯಂತರರು ತಮ್ಮ ವಿಭಾಗ ವ್ಯಾಪ್ತಿಯ ರಸ್ತೆ ಗುಂಡಿಗಳನ್ನು ಮುಚ್ಚುವುದಕ್ಕೆ ಕೆ.ಟಿ.ಪಿ.ಪಿ ಕಾಯ್ದೆಯ ಅನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ವಾರ್ಷಿಕ ಟೆಂಡರ್ ಆಹ್ವಾನಿಸಿ ಗುತ್ತಿಗೆದಾರರನ್ನು ನೇಮಿಸಿಕೊಳ್ಳುವುದು ಮತ್ತು ರಸ್ತೆಗುಂಡಿಗಳನ್ನು ಮುಚ್ಚಿಸುವುದು. ಸದರಿ ಗುತ್ತಿಗೆದಾರರ ಗುತ್ತಿಗೆ ಅವಧಿಯನ್ನು ಯಾವುದೇ ಕಾರಣಕ್ಕೆ ನಿಗದಿತ ಗುತ್ತಿಗೆ ಅವಧಿಗಿಂತ ಹೆಚ್ಚಿಗೆ ಅವಧಿಗೆ ಮುಂದುವರೆಸತಕ್ಕದ್ದಲ್ಲ. ನಿಯಮಿತವಾಗಿ ಟೆಂಡರ್ ಕರೆಯದೇ ಗುತ್ತಿಗೆದಾರರನ್ನು ಮುಂದುವರೆಸಿದಲ್ಲಿ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರನ್ನು ನೇರವಾಗಿ ಜವಾಬ್ದಾರರಾಗಿಸಿ ಶಿಸ್ತುಕ್ರಮ ಜರುಗಿಸಲಾಗುವುದು.

8. ರಸ್ತೆಗುಂಡಿ ಮುಚ್ಚಿಸುವುದಕ್ಕೆ ಕೇಂದ್ರ ಕಛೇರಿಯಿಂದಲೇ ಗುತ್ತಿಗೆದಾರರು ನೇಮಕಗೊಂಡಲ್ಲಿ ರಸ್ತೆಗುಂಡಿ ಮುಚ್ಚುವ ಜವಾಬ್ದಾರಿ ಅಂತಹ ಗುತ್ತಿಗೆದಾರರು ಮತ್ತು ಮೇಲ್ವಿಚಾರಣಾ ವಿಭಾಗೀಯ ಕಾರ್ಯಪಾಲಕ ಅಭಿಯಂತರರದ್ದಾಗಿರುತ್ತದೆ.

9. ಲಗತ್ತಿಸಿರುವ ಅನುಬಂಧ 1 ರ ಮಾದರಿಯಲ್ಲಿ ಪ್ರಧಾನ ಅಭಿಯಂತರರ ಕಛೇರಿಗೆ ಮುಖ್ಯ ಅಭಿಯಂತರರ ಹಂತದಲ್ಲಿ ಕ್ರೋಢೀಕರಿಸಿ ಪ್ರತಿ ಮಾಹೆ ವರದಿ ಸಲ್ಲಿಸತಕ್ಕದ್ದು.

ರಸ್ತೆ ಕತ್ತರಿಸುವ ಸಂಸ್ಥೆ/ವ್ಯಕ್ತಿಗಳಿಂದ ರಸ್ತೆ ಪುನಶ್ಚೇತನ ಮೊತ್ತವನ್ನು ಬಿಬಿಎಂಪಿಯು ಪಡೆದುಕೊಂಡ ತರುವಾಯದಲ್ಲಿ ರಸ್ತೆ ಕತ್ತರಿಸುವುದರಿಂದ ಉದ್ಭವವಾಗುವ ಎಲ್ಲ ಗುಂಡಿ ಮತ್ತು ಟ್ರೆಂಚ್‌ಗಳನ್ನು ಮುಚ್ಚುವ ಜವಾಬ್ದಾರಿಯನ್ನು ಬಿಬಿಎಂಪಿಯು ಹೊಂದಿದ್ದು, ಯಾವುದೇ ರಸ್ತೆಕತ್ತರಿಸಿದ ಭಾಗವನ್ನು ಪುನಶ್ಚೇತನಗೊಳಿಸಲು ತಮ್ಮ ಕಾರ್ಯವ್ಯಾಪ್ತಿಗೆ ಸೀಮಿತವಾಗಿ ಕಾರ್ಯಪಾಲಕ ಅಭಿಯಂತರರು ಮತ್ತು

ಸಹಾಯಕ ಕಾರ್ಯಪಾಲಕ ಅಭಿಯಂತರರು ವೈಯಕ್ತಿಕ ಕಾರ್ಯಬಾಧ್ಯತೆಯನ್ನು ಹೊಂದಿರುತ್ತಾರೆ. ಪಾಲಿಕೆ ವ್ಯಾಪ್ತಿಯ ರಸ್ತೆಗಳನ್ನು ಅಗೆದು ಅನಧಿಕೃತ ಅಳವಡಿಕೆ ನಡೆಯುತ್ತಿರುವಾಗ ತಟಸ್ಥವಾಗಿರುವ ಅಧಿಕಾರಿಗಳು ರಸ್ತೆ ನಿರ್ವಹಣೆಯ ಸಮಸ್ಯೆಗಳಾದಾಗ ರಸ್ತೆಗುಂಡಿಗಳಾಗಿರುವುದಕ್ಕೆ ಅನಧಿಕೃತ ಮೂಲಸೌಕರ್ಯ/ಓ.ಎಫ್.ಸಿ. ಅಳವಡಿಕೆ ಕಾರಣ ಎಂದು ಸಬೂಬು ಹೇಳುವುದನ್ನು ಕರ್ತವ್ಯ ನಿರ್ಲಕ್ಷ ಎಂದು ಪರಿಗಣಿಸಲಾಗುವುದು.

ರಸ್ತೆಗುಂಡಿಗಳನ್ನು ಮುಚ್ಚಿಸದಿದ್ದಲ್ಲಿ ಪಾಲಿಕೆಯ ಶಾಸನಾತ್ಮಕ ಮತ್ತು ಸಂವಿಧಾನಾತ್ಮಕ ಜವಾಬ್ದಾರಿಗೆ ಚ್ಯುತಿ ಬರುವ ಹಿನ್ನೆಲೆಯಲ್ಲಿ ಸದರಿ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ ತೋರಿರುವುದು ಅಥವಾ ಆದೇಶವನ್ನು ಉಪೇಕ್ಷಿಸಿರುವುದು ಅಥವಾ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದು ಕಂಡುಬಂದಲ್ಲಿ ಸಂಬಂಧಪಟ್ಟ ಸಹಾಯಕ, ಸಹಾಯಕ ಕಾರ್ಯಪಾಲಕ ಮತ್ತು ಕಾರ್ಯಪಾಲಕ ಅಭಿಯಂತರರನ್ನು ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ.

ಬಿ.ಹೆಚ್. ಅನಿಲ್ ಕುಮಾರ್ 29/11/2019
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿ:</u>

1. ಪೂಜ್ಯ ಮಹಾಪೌರರ ಅವಗಾಹನೆಗೆ
2. ಮಾನ್ಯ ಉಪಮಹಾಪೌರರು
3. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ
4. ವಿಶೇಷ ಆಯುಕ್ತರು, ಯೋಜನೆ/ಹಣಕಾಸು
5. ಪ್ರಧಾನ ಅಭಿಯಂತರರು
6. ಎಲ್ಲಾ ವಲಯಗಳ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ
7. ಮುಖ್ಯ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) ಸೂಕ್ತ ಕ್ರಮಕ್ಕಾಗಿ
8. ಮುಖ್ಯ ಅಭಿಯಂತರರು (ಓ.ಎಫ್.ಸಿ.ಕೋಶ) ಸೂಕ್ತ ಕ್ರಮಕ್ಕಾಗಿ
9. ಪಾಲಿಕೆಯ ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ – ಪಾಲಿಕೆಯ ಜಾಲತಾಣದಲ್ಲಿ ಕಛೇರಿ ಆದೇಶವನ್ನು ಪ್ರಚುರಪಡಿಸುವುದಕ್ಕಾಗಿ ಮತ್ತು ಪಾಲಿಕೆಯ MARCCS ಮತ್ತು ಓ.ಎಫ್.ಸಿ.–ಜಿ.ಐ.ಎಸ್. ಮತ್ತು ಇತರ ತಂತ್ರಾಂಶಗಳಲ್ಲಿ ಅಗತ್ಯ ಬದಲಾವಣೆ ಮಾಡುವುದಕ್ಕಾಗಿ.
10. ಕಛೇರಿ ಕಡತಕ್ಕೆ.

## ಅನುಬಂಧ-1

## ರಸ್ತೆಕತ್ತರಿಸಿದ ಭಾಗಗಳನ್ನು ಪುನಶ್ಚೇತನಗೊಳಿಸಿರುವ ಬಗ್ಗೆ ಮಾಸಿಕ ವರದಿ

ಮಾಹೆ -2019

ಮುಖ್ಯ ಅಭಿಯಂತರರು- ವಲಯ/ರ.ಮೂ.ಸೌ./ಯೋ.ಕೇ.

(1) ಅಧಿಕೃತ

| ಕ್ರ.ಸಂ. | ರಸ್ತೆ | ವಿಭಾಗದ ವಿವರ | ತೆರೆಯಲಾದ ಪಿಟ್ ಸಂಖ್ಯೆ | ಮುಚ್ಚಲಾದ ಪಿಟ್ ಸಂಖ್ಯೆ | ಬಿಲ್ ಪಾವತಿಸಲಾಗಿದೆಯೆ? |
|---|---|---|---|---|---|
| | | | | | |
| | | | | | |

(2)ಅನಧಿಕೃತ

| ಕ್ರ.ಸಂ. | ರಸ್ತೆ | ವಿಭಾಗದ ವಿವರ | ತೆರೆಯಲಾದ ಪಿಟ್ ಸಂಖ್ಯೆ | ಮುಚ್ಚಲಾದ ಪಿಟ್ ಸಂಖ್ಯೆ | ಬಿಲ್ ಪಾವತಿಸಲಾಗಿದೆಯೆ? | ದಂಡ ವಸೂಲು ಮಾಡಲಾಗಿದೆಯೆ? |
|---|---|---|---|---|---|---|
| | | | | | | |
| | | | | | | |

(3)ಒಟ್ಟು

| ಕ್ರ.ಸಂ. | ವಿವರ | ತೆರೆಯಲಾದ ಪಿಟ್ ಸಂಖ್ಯೆ | ಮುಚ್ಚಲಾದ ಪಿಟ್ ಸಂಖ್ಯೆ | ದಂಡ ವಸೂಲು ಮಾಡಲಾಗಿದೆಯೆ? |
|---|---|---|---|---|
| (1) | ಅಧಿಕೃತ | | | |
| (2) | ಅನಧಿಕೃತ | | | |
| | ಒಟ್ಟು | | | |